

# ಜಯಂತ ಕಾಯ್ಕಿಣಿ



ಎಸ್.ವಿ. ಹೂಗಾರ

ಕಾಗದದ ಮೇಲೆ ಒಂಟಿಕಾಲಲ್ಲಿ ಚಲಿಸುತ್ತಿದ್ದ ವಾಕ್ಯವೊಂದು ಹಠಾತ್ತನೆ ನಿಂತಂತೆ, ವಿಲೋಮ, ಕಂಠೀರವ ಸ್ಟುಡಿಯೋದ ಗೇಟಿನ ಸೆಕ್ಯುರಿಟಿಯವನ ಇಶಾರೆ ನೋಡಿ ನಿಂತ. 'ಎವರ್‌ಗ್ರೀನ್ ಹೀರೋ ಶರತ್‌ಚಂದ್ರ ಅವರ ಶೂಟಿಂಗ್ ಯಾವ ಫ್ಲೋರ್?' ಎಂದು ಕೇಳಿದ. ಸೆಕ್ಯುರಿಟಿಯವ 'ನೀವ್ಯಾರು?' ಎಂದಿದ್ದಕ್ಕೆ 'ಅವರ ಸಂಬಂಧಿ, ಅವರೇ ಕರೆದಿದ್ದಾರೆ, ಅವರಿಗೇ ಅರ್ಜಂಟ್ ಕೆಲಸ ಇದೆ' ಎಂದು ಅವಸರದಲ್ಲಿ ನುಡಿದು ಹೆಲ್ಮೆಟ್ ಎಡಗೈಗೆ ವರ್ಗಾಯಿಸಿ, ಬಲಗೈಯಿಂದ ಸಹಿ ಮಾಡಿದ. ಗಾರ್ಡ್ ನಿರುಕಿಸಿ ನೋಡುತ್ತ ಒಳಗೆ ಬಿಟ್ಟ. ಸಾಲಾಗಿ ಅಲ್ಲಲ್ಲಿ ನಿಂತ ಜನರೇಟರ್ ಲಾರಿಗಳು, ನೀರಿನ ಟ್ಯಾಂಕರುಗಳು, ನಟ ನಟಿಯರ ವಿಶ್ರಾಂತಿಗೆಂದು ನಿಲ್ಲಿಸಿರುವ ಮೂರ್ಖದರ್ಪದ 'ಕಾರವಾನ್'ಗಳು ಮತ್ತು ಗುಂಪು ಗುಂಪಾಗಿ ಒಟ್ಟಿಗಿದ್ದೂ ಒಟ್ಟಿಗಿಲ್ಲದವರಂತೆ ಕಾಣುವ ಜನಗಳು... ಬಿ ಫ್ಲೋರಿನ ಎದುರಿನ ಚಟುವಟಿಕೆ ನೋಡಿದರೆ ಅಲ್ಲಿಯೇ ಶೂಟಿಂಗ್ ಇದ್ದಂತಿತ್ತು. ನೀಳ ನಿಲುವಿನ ಖಚಿತ ನಡಿಗೆಯ ಚಿಗುರು ಗಡ್ಡದ ವಿಲೋಮನನ್ನು ಯಾರೂ ತಡೆಯಲಿಲ್ಲ. ಸೆರೆಮನೆಯಂಥ ದೊಡ್ಡ ದಿಡ್ಡಿ ಬಾಗಿಲಿನ ಇನ್ನೊಂದು ಪುಟ್ಟ ಬಾಗಿಲಲ್ಲಿ ತಲೆ ತಗ್ಗಿಸಿ ಹೊಕ್ಕು ವಾಯರುಗಳ ನಡುವೆ ಕಾಲಿಡುತ್ತಿರುವಾಗಲೇ 'ಲೈಟ್ ಆಫ್' ಎಂಬ ಘೋಷಣೆಯಾಗಿ ಎಲ್ಲ ಪ್ರಖರ ದೀಪಗಳೂ ಆರಿ ಕತ್ತಲಾವರಿಸಿತು. ಒಂದೆರಡು ಮಂಕು ದೀಪಗಳಿಗೆ ಕಣ್ಣು ಹೊಂದಿಕೊಳ್ಳುತ್ತಿರುವಾಗ ಶಾಟ್ ಮುಗಿಸಿದ ಶರತ್‌ಚಂದ್ರ ಬೆವರುತ್ತ ಎದುಸಿರುಬಿಡುತ್ತ ಪಕ್ಕದಲ್ಲಿದ್ದ ಕಬ್ಬಿಣದ ಕುರ್ಚಿಗೆ ಬಂದು ಕೂರುತ್ತಿದ್ದರು.